ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ

SECRETARY TO GOVT. (BUDGET & RESOURCES), FINANCE DEPARTMENT

ದಿನಾಂಕ:06.01.2017

ಅ.ಸ.ಪತ್ರ ಸಂಖ್ಯೆ: ಆಇ 69 ಬಿಜಿಎಲ್ 2016

ಮಾನ್ಯರೆ,

ಭಾರತೀಯ ರಿಸರ್ವ್ ಬ್ಯಾಂಕು ಇತ್ತೀಚಿನ ದಿನಗಳಲ್ಲಿ ಹಲವಾರು ನ್ಯಾಯಾಲಯಗಳಿಂದ ಹೆಚ್ಚಿನ ಸಂಖ್ಯೆಯ ಜಪ್ತಿ ಆದೇಶಗಳನ್ನು ಸ್ವೀಕರಿಸುತ್ತಿದ್ದು, ಈ ರೀತಿ ಸ್ವೀಕೃತವಾದ ಆದೇಶಗಳನ್ನು ಮತ್ತು advice ಗಳನ್ನು ಸಂಬಂಧಿಸಿದ ಸರ್ಕಾರಿ ಇಲಾಖೆಗಳಿಗೆ ಕಳುಹಿಸಿ, ಸದರಿ ನ್ಯಾಯಾಲಯದ ಆದೇಶಗಳನ್ನು ತೆರವುಗೊಳಿಸಲು ಕ್ರಮವಹಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಿರುತ್ತದೆ. ಆದಾಗ್ಯೂ, ಸಂಬಂಧಿಸಿದ ಇಲಾಖೆಗಳು ಈ ವಿಷಯದಲ್ಲಿ ತುರ್ತಾಗಿ ಕ್ರಮವಹಿಸದೇ ಇರುವುದರಿಂದ, ಭಾರತೀಯ ರಿಸರ್ವ್ ಬ್ಯಾಂಕ್‌ನವರು ಡಿಕ್ರಿ ಆದ ಮೊತ್ತವನ್ನು ಸರ್ಕಾರದ Inter Government Treasury Account ಲೆಕ್ಕಕ್ಕೆ ಖರ್ಚು ಹಾಕಿ, ಸರ್ಕಾರದ ಸಂಚಿತ ನಿಧಿಯಿಂದ ಪಾವತಿ ಮಾಡಿ, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಹಾಗೂ ಹಿರಿಯ ಲೆಕ್ಕಾಧಿಕಾರಿಗೆ, ಮಹಾಲೇಖಪಾಲರ ಕಛೇರಿ (ಎ&ಇ), ಬೆಂಗಳೂರು ರವರಿಗೆ ಹಿಂಬರಹ ನೀಡುತ್ತಾ ಬಂದಿದೆ.

ಕರ್ನಾಟಕ ರಾಜ್ಯದಲ್ಲಿನ ಹಲವಾರು ನ್ಯಾಯಾಲಯಗಳು ಪ್ರತಿದಿನ ಮೊಕದ್ದಮೆಗಳು, ಭೂ ಸ್ವಾಧೀನ (land acquisition) ಪ್ರಕರಣಗಳು ಮತ್ತು ಇತರೆ ಪ್ರಕರಣಗಳಲ್ಲಿ ಜಪ್ತಿ ಆದೇಶ (attachment warrant)ಗಳನ್ನು ಹೊರಡಿಸುತ್ತಿರುವುದನ್ನು ಗಮನಿಸಬಹುದು. ನ್ಯಾಯಾಲಯಗಳಿಂದ ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಇಂತಹ ಜಪ್ತಿ ಆದೇಶಗಳು ಸ್ವೀಕೃತಗೊಂಡು, ಆಡಳಿತ ಇಲಾಖೆಗಳು ಸಕಾಲದಲ್ಲಿ ಸೂಕ್ತವಾಗಿ ಇದಕ್ಕೆ ಪ್ರತಿಕ್ರಿಯಿಸದೇ ಇದ್ದಲ್ಲಿ ಗತ್ಯಂತರವಿಲ್ಲದೇ ಭಾರತೀಯ ರಿಸರ್ವ್ ಬ್ಯಾಂಕು ನ್ಯಾಯಾಲಯದ ಆದೇಶವನ್ನು ಪಾಲಿಸಲೇಬೇಕಾಗುತ್ತದೆ. ಸಂಬಂಧಪಟ್ಟ ಇಲಾಖೆಗಳು ಡಿಕ್ರಿ ಮೊತ್ತದ ಬಗ್ಗೆ ನಿಗದಿತ ಅವಧಿಯೊಳಗೆ ಸೂಕ್ತ ಕ್ರಮಕೈಗೊಂಡರೆ ಪ್ರಕರಣವು ಜಟಿಲಗೊಳ್ಳುವುದನ್ನು ತಪ್ಪಿಸಬಹುದಾಗಿದೆ. ಸಂಬಂಧಪಟ್ಟ ಇಲಾಖೆಗಳು ನ್ಯಾಯಾಲಯದ ಜಪ್ತಿ ಆದೇಶಗಳನ್ನು (attachment order) ಆದ್ಯತೆಯ ಮೇಲೆ, ವಿಳಂಬಕ್ಕೆ ಅವಕಾಶವಿಲ್ಲದಂತೆ ವ್ಯವಹರಿಸಬೇಕಾಗುತ್ತದೆ. ಜಪ್ತಿ ಆದೇಶಗಳನ್ನು ತೆರವು ಮಾಡುವಲ್ಲಿ ಸಹ ಸಂಬಂಧಪಟ್ಟ ಆಡಳಿತ ಇಲಾಖೆಗಳು ಸಕಾಲಿಕ ಕ್ರಮವನ್ನು ಕೈಗೊಂಡು ತಮ್ಮ counsel/ಸರ್ಕಾರಿ ವಕೀಲರಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು. ಆಡಳಿತ ಇಲಾಖೆಗಳು ಈ ರೀತಿ ಸಕಾಲಿಕ ಹಾಗೂ ತಕ್ಷಣದ ಕ್ರಮಗಳನ್ನು ಕೈಗೊಂಡರೆ ಭಾರತೀಯ ರಿಸರ್ವ್ ಬ್ಯಾಂಕು ಸರ್ಕಾರದ ಸಂಚಿತ ನಿಧಿಯಿಂದ ಈ ವಾರೆಂಟ್‌ಗಾಗಿ ಪಾವತಿ ಮಾಡುವುದನ್ನು ತಪ್ಪಿಸಬಹುದಾಗಿದೆ. ಇದರಿಂದ, ಸರ್ಕಾರವು ಅನಗತ್ಯವಾಗಿ ಬಡ್ಡಿ ಪಾವತಿ ಮಾಡುವುದು ಸಹ ತಪ್ಪುತ್ತದೆ.

ಆದ್ದರಿಂದ, ಜಪ್ತಿ ಆದೇಶಗಳನ್ನು (attachment order) ತೆರವುಗೊಳಿಸಲು ಸಕಾಲಿಕವಾದ ಕ್ರಮವನ್ನು ಕೈಗೊಳ್ಳುವಂತೆ ಆಡಳಿತ ಇಲಾಖೆಗಳಿಗೆ ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

(ಅರವಿಂದ ಶ್ರೀವಾಸ್ತವ)

ಶ್ರೀ ಭರತ್ ಲಾಲ್ ಮೀನ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಉನ್ನತ ಶಿಕ್ಷಣ)
ಶಿಕ್ಷಣ ಇಲಾಖೆ
ಬಹುಮಹಡಿ ಕಟ್ಟಡ
ಬೆಂಗಳೂರು- 560 001.

2ನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560 001 2nd Floor, Vidhana Soudha, Bengaluru - 560 001
Phone: 080-22353138 / 22033438 Fax: 080-22280520 e-mail: secybud-fd@karnataka.gov.in

ಹಿಂಬರಹ ಸಂಖ್ಯೆ: ಡಿಟಿಇ 68 ಕಾಫ್ 2013 / 4906 ದಿ:07-03-2017

ಮೇಲ್ಕಂಡ ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ ಇವರ ದಿ: 06-01-2017 ರ ಪತ್ರದಲ್ಲಿನ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪರಿಪಾಲಿಸುವಂತೆ ತಿಳಿಸಿದೆ.

ನಿರ್ದೇಶಕರು

7/3/17

ಇವರಿಗೆ: (ಸೂಕ್ತ ಕ್ರಮಕ್ಕಾಗಿ)

(1) ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳಿಗೆ

(2) ಪ್ರಾಚಾರ್ಯರು- ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು/ಕಿರಿಯ ತಾಂತ್ರಿಕ ಶಾಲೆಗಳು ಹಾಗೂ ಚಿತ್ರಕಲಾ ಮಹಾವಿದ್ಯಾಲಯ

ಪ್ರತಿ :

(1) ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಇ-ಗೌರ್ನೆನ್ಸ್ ವಿಭಾಗಕ್ಕೆ

(2) ಕಛೇರಿ ಪ್ರತಿ